ಕರ್ನಾಟಕ ವಿಧಾನಸಭೆ

ಶುಕ್ರವಾರ 30ನೇ ಜುಲೈ 2004 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣ ರವರು)

ಪೀಠವನ್ನು ಅಲಂಕರಿಸಿದ್ದರು.

ಅಧ್ಯಕ್ಷರು : ಈಗ ವಿತ್ತೀಯ ಕಾರ್ಯಕಲಾಪವನ್ನು ತೆಗೆದುಕೊಳ್ಳೋಣ. ಮಾನ್ಯ ಕಾರಜೋಳರವರೆ ತಾವು ಚರ್ಚೆಯನ್ನು ಪ್ರಾರಂಭಿಸಿ.

†**ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ)** : ಸನ್ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿನ ಚರ್ಚೆಯನ್ನು ಮಾಡುವ ಕಾಲದಲ್ಲಿ ಸಮಯ ಸಾಕಾಗದೇ ಇದ್ದುದರಿಂದ ನಾನು ಇವತ್ತು ಮುಂದುವರಿಸುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ಕಾರಜೋಳರವರೆ, ತಮಗೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡುತ್ತೇನೆ.

1. ಅಧ್ಯಕ್ಷರ ಅಪ್ಪಣೆ ಮೇರೆಗೆ

ಶಾಸಕರ ನಿಧಿ ಹಾಗೂ ಚಾಮರಾಜನಗರ ಕಬ್ಬು ಬೆಳೆಗಾರರಿಗೆ ಉತ್ತಮ ಕಬ್ಬಿನ ಬೆಲೆ ನೀಡುವ ಬಗ್ಗೆ.

†**ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)** : ಮಾನ್ಯ ಅಧ್ಯಕ್ಷರೆ, ಮಾನ್ಯ ಕಾರಜೋಳರವರೆ ಒಂದು ನಿಮಿಷ ತಾಳಿ. ಮಾನ್ಯ ಉಪ ಮುಖ್ಯಮಂತ್ರಿಗಳು ಈಗ ಆಯವ್ಯಯದ ಬಗ್ಗೆ ಉತ್ತರವನ್ನು ಕೊಡುತ್ತಾರೆ. ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ ಅವರು ಬಂದ ನಂತರ ಇಡೀ ಶಾಸಕರ ಮತ್ತು ಎಲ್ಲರ ಪರವಾಗಿಯೂ 50 ಲಕ್ಷ ರೂಪಾಯಿಗಳನ್ನು ಶಾಸಕರ ನಿಧಿಯಾಗಿ ಅವರು ಇಲ್ಲಿ ದಯವಿಟ್ಟು ಪ್ರಕಟ ಮಾಡಲೇ ಬೇಕು. ಇಲ್ಲದೆ ಹೋದರೆ ಈ ಶಾಸಕರಿಗೆ ಹಾಗೂ ಸದನಕ್ಕೆ ಯಾವುದೇ ಕಿಮ್ಮತ್ತು ಬರುವುದಿಲ್ಲ.

ಅಧ್ಯಕ್ಷರು : ತಾವು ಈಗಾಗಲೇ ತಮ್ಮ ಭಾಷಣದಲ್ಲಿ ಹೇಳಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ತಾವು ಒಬ್ಬರು ಒಂದು ಕ್ಷೇತ್ರದಲ್ಲಿ ಬಂದಿದ್ದೀರಿ. 50 ಲಕ್ಷ ರೂಪಾಯಿಗಳನ್ನು ಪ್ರಾಮಾಣಿಕವಾಗಿ ಎಷ್ಟೇ ತೊಂದರೆಯಾದರೂ ಕೂಡ ಚಿಂತೆಯಿಲ್ಲ. ಸರ್ಕಾರ ಎಷ್ಟೇ ತೊಂದರೆಗೆ ಸಿಲುಕಿದರೂ ಚಿಂತೆಯಿಲ್ಲ. 50 ಲಕ್ಷ ರೂಪಾಯಿ ಶಾಸಕರ ನಿಧಿಯನ್ನು ಅವರು ಪ್ರಕಟ ಮಾಡಲೇಬೇಕು. ಇನ್ನು ಎರಡನೆಯದಾಗಿ ಹೇಳುವುದಾದರೆ, ಮೈಸೂರು ಮತ್ತು ಚಾಮರಾಜನಗರದ ಕಬ್ಬು ಬೆಳೆಗಾರರಿಗೆ ಒಂದು ಟನ್‌ಗೆ 1250 ರೂಪಾಯಿಗಳನ್ನು ಕಬ್ಬಿಗೆ ಬೆಲೆಯನ್ನು ಕೊಡಬೇಕು. ಇದು ಸ್ಪಷ್ಟ, ರೈತರಿಗೆ ಜೀವವಿಮಾ ಬೆಳೆಯನ್ನು ಅವರು ಮಾಡಲಿ. ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರವನ್ನು ಶುರು ಮಾಡುವ ಕಾಲಕ್ಕೆ ನಾನು ತಮಗೆ ಹೇಳುತ್ತೇನೆ.

110-3

ಅಧ್ಯಕ್ಷರು : ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರ ಕೊಡುವಂತಹ ಕಾಲದಲ್ಲಿ ತಾವು ಪ್ರಸ್ತಾಪ ಮಾಡಿ. ದಯಮಾಡಿ ಈಗ ಮಾನ್ಯ ಕಾರಜೋಳರವರ ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುವ ಕಾಲದಲ್ಲಿ ನಾನು ಪ್ರಸ್ತಾಪ ಮಾಡುತ್ತೇನೆ.

ಅಧ್ಯಕ್ಷರು : ಆಯಿತು. ಈಗ 11–00 ಗಂಟೆಯವರೆವಿಗೆ ಚರ್ಚೆ ನಡೆಯಲಿ. ದಯಮಾಡಿ ಎಲ್ಲಾ ಶಾಸಕರುಗಳು ಸಹಕರಿಸಬೇಕು. ಎಲ್ಲಾ ಸದಸ್ಯರುಗಳು 5–5 ನಿಮಿಷಗಳ ಕಾಲ 3–4 ಜನ ಸದಸ್ಯರು ಚರ್ಚೆ ಮಾಡಲಿ.

ಶ್ರೀ ಗೋವಿಂದ ಎಂ. ಕಾರಜೋಳ : ಈ ರಾಜ್ಯದಲ್ಲಿ ಸುಮಾರು 8 ಲಕ್ಷ....

ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುವ ಲಿಸ್ಟ್‌ನಲ್ಲಿದ್ದೇನೆ. ಅವರಿಗೆ ತಾವು ಮತ್ತೆ ಪುನಃ ಪುನಃ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತಿದ್ದೀರಿ. ನಾವೇನು ಮಾಡಬೇಕು ಹೇಳಿ. ನಾನು ತಮ್ಮ ಹತ್ತಿರ ಕೇಳುವುದನ್ನು ಬಿಟ್ಟು ಇನ್ನು ಯಾರ ಹತ್ತಿರ ಹೇಳಬೇಕು.

ಅಧ್ಯಕ್ಷರು : ಆಯಿತು. ದಯಮಾಡಿ ತಾವು ಕುಳಿತುಕೊಳ್ಳಿ.

2. ವಿತ್ತೀಯ ಕಾರ್ಯಕಲಾಪಗಳು

2004-05ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆ (ಮುಂದು)

† **ಶ್ರೀ ಗೋವಿಂದ ಎಂ. ಕಾರಜೋಳ** : ಈ ರಾಜ್ಯದಲ್ಲಿ 8 ಲಕ್ಷ ಜನ ನೇಕಾರರು ನೇಕಾರಿಗೆ ಉದ್ಯೋಗವನ್ನೇ ಅವಲಂಬಿಸಿ ಜೀವನ ಮಾಡತಕ್ಕಂತಹವರು ಇದ್ದಾರೆ. ಕಳೆದ 10 ತಿಂಗಳಿಂದ ಅವರಿಗೆ ಸರ್ಕಾರ ಉದ್ಯೋಗವನ್ನು ಕೊಡುವುದರಲ್ಲಿ ವಿಫಲವಾದುದರಿಂದಾಗಿ ಅವರು ಬಹಳ ಸಂಕಷ್ಟದಲ್ಲಿದ್ದಾರೆ. ಈ ವಿಷಯದ ಬಗ್ಗೆ ನಾನು ಹಿಂದಿನ ಅಧಿವೇಶನದಲ್ಲಿಯೂ ಕೂಡ ಈ ಸದನದಲ್ಲಿ ಪ್ರಸ್ತಾಪವನ್ನು ಮಾಡಿದ್ದೆ.

ನೇಕಾರರು ಇವತ್ತು ಉದ್ಯೋಗವಿಲ್ಲದೆ ಹಳ್ಳಿಗಳಲ್ಲಿ ಮತ್ತು ಪಟ್ಟಣ ಪ್ರದೇಶಗಳಲ್ಲಿ ವಿಭೂತಿ ಮತ್ತು ಕರ್ಪೂರ ಅಗರಬತ್ತಿ ಮಾರಾಟ ಮಾಡಿಕೊಂಡು ಲಾಟರಿ ಟಿಕೇಟನ್ನು ಮಾರುವವರ ತರಹ ರಸ್ತೆಯಲ್ಲಿ ಅಲೆಯುತ್ತಿದ್ದಾರೆ. ಅದರ ಬಗ್ಗೆ ಈ ವಿಷಯವನ್ನು ಗಮನಕ್ಕೆ ತಂದಾಗ ಮಾನ್ಯ ಹಣಕಾಸಿನ ಸಚಿವರು 72 ಕೋಟಿ ರೂಪಾಯಿಗಳನ್ನು ಸಮವಸ್ತ್ರವನ್ನು ಪೂರೈಸುವುದನ್ನು ಕೆಹೆಚ್‌ಡಿಸಿಗೆ ಆದೇಶವನ್ನು ಮಾಡಿದ್ದಾರೆ. ಇದನ್ನು ನಾನು ಸ್ವಾಗತ ಮಾಡುತ್ತೇನೆ, ಆದರೆ ನಾನು ಮಾನ್ಯ ಹಣಕಾಸಿನ ಸಚಿವರಲ್ಲಿ ದಯಮಾಡಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಬರೀ ಆದೇಶವನ್ನು ಕೊಟ್ಟರೆ **ಕೆಹೆಚ್‌ಡಿಸಿ**ಯವರು ಇವತ್ತು ನೇಕಾರಿಕೆಯನ್ನು ಪ್ರಾರಂಭ ಮಾಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. **25 ಪರ್ಸೆಂಟ್** ಆದರೂ ಅಡ್ವಾನ್ಸ್ ಹಣವನ್ನು ಕೊಟ್ಟರೆ ಮಾತ್ರ ಅವರು ಮಾಡುವುದಕ್ಕೆ ಸಾಧ್ಯವಿದೆ. ತಮಗೆ ಗೊತ್ತಿರುವ ಹಾಗೆ ಈಗ ಕೆಹೆಚ್‌ಡಿಸಿ ನಷ್ಟದಲ್ಲಿರತಕ್ಕಂತಹ ಸಂಸ್ಥೆ. ಇದುವರೆವಿಗೂ ಸುಮಾರು 43 ಕೋಟಿ ರೂಪಾಯಿಗಳಷ್ಟು ನಷ್ಟದಲ್ಲಿದೆ. ಅವರ ಹತ್ತಿರ ವರ್ಕಿಂಗ್ ಕ್ಯಾಪಿಟಲ್ ಇಲ್ಲ, ಅದಕ್ಕಾಗಿ. ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ದಯಮಾಡಿ ಅವರ ಸಮಸ್ಯೆಯನ್ನು ಪರಿಹರಿಸುವುದಕ್ಕಾಗಿ ಅವರಿಗೆ ಅಡ್ವಾನ್ಸ್ ಕೊಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ನೇಕಾರರಿಗೆ ಅಗತ್ಯವಾಗಿ ಆಗಬೇಕಾದಂತಹ ಕೆಲಸವೆಂದರೆ, ಸುಮಾರು 10 ಮಗ್ಗಗಳಿಗಾದರೂ